ಜಲಾಶಯದ ಸರ್ವೇಕಾರ್ಯ ಕೈಗೊಂಡು, ಒತ್ತುವರಿ ಕಂಡು ಬಂದಲ್ಲಿ ಅದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಾಗುವುದು.

ಇ) ಈ ಜಲಾಶಯದ ಹೂಳು ತೆಗೆಯುವ ಪ್ರಸ್ತಾವನೆ ಇರುವುದಿಲ್ಲ. ಆದರೆ 2011–12ನೇ ಸಾಲಿನಲ್ಲಿ 13ನೇ ಹಣಕಾಸು ಆಯೋಗದ ಅನುದಾನದಡಿ ಜಲಾಶಯದ ಪುನರುಜ್ಜೀವನಕ್ಕಾಗಿ ರೂ. 95.00 ಲಕ್ಷ ಅಂದಾಜು ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ.

ಶ್ರೀ ವಿ. ಎಸ್. ಪಾಟೀಲ್:–ಅಧ್ಯಕ್ಷರೆ, ಜಲಾಶಯದ ವಿಸ್ತೀರ್ಣ 203 ಹೆಕ್ಟೇರ್, ಇದರಿಂದ ಪ್ರಯೋಜನ ಪಡೆಯಬಹುದಾದ ನೀರಾವರಿ ಕ್ಷೇತ್ರ 1944 ಹೆಕ್ಟೇರ್ ಎಂದು ಈಗಾಗಲೇ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅಷ್ಟು ಹೆಕ್ಟೇರ್‌ಗೆ ಇನ್ನೂ ನೀರು ಉಣಿಸುತ್ತಿಲ್ಲ. ಅದಕ್ಕೂ ನೀರು ಉಣಿಸುವಂಥ ಕಾರ್ಯವನ್ನು ಮಾಡಬೇಕು. ಕೆರೆಯ ಒತ್ತುವರಿಯನ್ನು ಸಾಕಷ್ಟು ಜನ ಮಾಡಿರುವುದಿರಿಂದ ಅದನ್ನು ಬಿಡಿಸುವಂಥ ಕಾರ್ಯ ಆಗಬೇಕು. ಜಲಾಶಯದಲ್ಲಿ ಸಾಕಷ್ಟು ಹೂಳು ತುಂಬಿದೆ. ಅದನ್ನು ತೆಗೆಸುವಂಥ ಕೆಲಸವಾಗಬೇಕು. ಈಗಾಗಲೇ ಈ ಜಲಾಶಯವನ್ನು ಮಾಡಿ 30 ವರ್ಷಗಳಾಯಿತು. ಆದರೆ ಅಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಆಗಿಲ್ಲ. ಅದು ಆಗುವಂತೆ ಮಾಡಿಕೊಡಬೇಕೆಂದು ನನ್ನ ಕಳಕಳಿ ವಿನಂತಿ.

ಶ್ರೀ ಗೋವಿಂದ ಎಂ. ಕಾರಜೋಳ: ಈ ವರ್ಷ 2011–12ನೇ ಸಾಲಿನಲ್ಲಿ 13ನೇ ಹಣಕಾಸು ಆಯೋಗದ ಅನುದಾನದಡಿ ಜಲಶಯದ ಪುನರುಜ್ಜೀವನಕ್ಕಾಗಿ 95.00 ಲಕ್ಷ ರೂಪಾಯಿಗಳ ಅಂದಾಜು ಮೊತ್ತವನ್ನು ಒದಗಿಸಿದ್ದೇವೆ. ನೀರಾವರಿ ಕ್ಷೇತ್ರ 1944 ಹೆಕ್ಟೇರ್ ಇದ್ದರೂ ಕೂಡ 545 ಹೆಕ್ಟೇರ್‌ನಷ್ಟು ನೀರಾವರಿ ಆಗುತ್ತಿದೆ. ಇನ್ನುಳಿದ ಪ್ರದೇಶಕ್ಕೆ ನೀರಾವರಿ ಆಗದೇ ಇರುವುದಕ್ಕೆ ಕಾರಣ ನಾಲೆ ದುರಸ್ತಿ ಇರಬಹುದು, ರೈತರ ಅನಾಸಕ್ತಿಯಿಂದ ತೆಗೆದುಕೊಳ್ಳದೆ ಇರಬಹುದು, ಈ ಕಾರಣದಿಂದಾಗಿ ಆಗಿಲ್ಲ. ಈ ವರ್ಷ 95.00 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ಜಲಾಶಯವನ್ನು ದುರಸ್ತಿ ಮಾಡಿಕೊಡುವಂಥ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು: ಶ್ರೀ ಅಭಯ್ ಪಾಟೀಲ್‌ರವರ ಪ್ರಶ್ನೆ ತೋಟಗಾರಿಕೆ ಇಲಾಖೆಗೆ ವರ್ಗಾವಣೆಯಾಗಿದೆ. ಅದು ಮುಂದಿನ ವಾರಕ್ಕೆ ಹೋಗಿದೆ.

ಶ್ರೀ ಅಭಯ್ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ. ಇದು ತಪ್ಪಾಗಿ ತೋಟಗಾರಿಕೆ ಇಲಾಖೆಗೆ ಹೋಗಿದೆ. ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಚಿವರು ಇಬ್ಬರೂ ಇದ್ದಾರೆ. ಅವರು ಉತ್ತರ ಕೊಡಬಹುದು. ಅಧ್ಯಕ್ಷರು ಇದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):– ಈ 2011ರ ಮಾರ್ಚ್‌ನಲ್ಲಿ ಬೆಳಗಾವಿಯಲ್ಲಿ ನಡೆದಂಥ ವಿಶ್ವ ಕನ್ನಡ ಸಮ್ಮೇಳನದ ನೆನಪಿಗಾಗಿ ಬೆಳಗಾವಿಯಲ್ಲಿ 25.00 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವಂತೆ Glass house and Garden ರೀತಿಯಲ್ಲಿ ಮಾಡಿಕೊಡುವುದಾಗಿ ಅಂದಿನ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರು. ಅದರಂತೆ ಈಗಾಗಲೇ ಈ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ತಂದು 5.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮಾನ್ಯ ಶಾಸಕರು ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೇ ಮಾಡಿಸಿಕೊಡಬೇಕೆಂದು ಬೇಡಿಕೆಯನ್ನು ಇಟ್ಟಿದ್ದಾರೆ. ಸರ್ಕಾರದಲ್ಲಿ ಸದರಿ ಬೇಡಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಕೆಯಿಂದಲೂ ಮಾಡಬಹುದು, ತೋಟಗಾರಿಕೆ ಇಲಾಖೆಯಿಂದಲಾದರೂ ಮಾಡಬಹುದು. ಆದರೆ ಮಾನ್ಯ ಶಾಸಕರ ಬೇಡಿಕೆಯಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೇ ಮಾಡಿಕೊಡುವುದಕ್ಕೆ ಸರ್ಕಾರ ಒಪ್ಪಿಗೆಯನ್ನು ಸೂಚಿಸುತ್ತದೆ.

ಗಿರಿಜನರಿಗೆ ಜಮೀನು

13 (260) ಶ್ರೀ ಹೆಚ್ ಪಿ. ಮಂಜುನಾಥ್ (ಹುಣಸೂರು):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ 280 ಗಿರಿಜನ ಕುಟುಂಬಗಳನ್ನು ಕಾಡಿನಿಂದ ಸ್ಥಳಾಂತರಿಸಿ ಪುನರ್ ವಸತಿಗೊಳಿಸಲಾಗುತ್ತಿದ್ದು, ಪ್ರತಿ ಕುಟುಂಬಕ್ಕೆ ಸರ್ಕಾರದ ಪ್ಯಾಕೇಜ್ ಅನ್ವಯ 5 ಎಕರೆ ಜಮೀನನ್ನು ಗಡಿ ನಿಗಧಿಪಡಿಸಿ ಶಾಸನ ಬದ್ಧವಾಗಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾಯಿಸಿ ಹಕ್ಕುಪತ್ರ ನೀಡಲಾಗಿದೆಯೇ ಮತ್ತು ಸದರಿ ಸರ್ವೆ ಕಾರ್ಯಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು (ವಿವರ ನೀಡುವುದು);

ಆ) ನಾಗಾಪುರ ಬ್ಲಾಕ್–1 ರಿಂದ 6 ಬ್ಲಾಕ್ ಗಳಲ್ಲಿನ ಗಿರಿಜನ ಕುಟುಂಬಗಳಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಇತರೆ ಮೂಲಗಳಿಂದ ಈವರೆಗೆ ಮಂಜೂರಾಗಿರುವ ಅನುದಾನವೆಷ್ಟು (ಆರ್ಥಿಕ ಹಾಗೂ ಭೌತಿಕ ವರದಿಯನ್ನು ನೀಡುವುದು);

ಇ) ಗಿರಿಜನರಿಗಾಗಿ ಸೌದೆ ಸಂಗ್ರಹ ವನ, ಮೇವು ಸಂಗ್ರಹಕ್ಕಾಗಿ ಹುಲ್ಲು, ಬನ್ನಿ ಸ್ಮಶಾನ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಿ ಅಭಿವೃದ್ಧಿ ಪಡಿಸಲಾಗಿದೆಯೇ (ವಿಸ್ತೀರ್ಣ, ಚಕ್ಕುಬಂದಿಗೆ ವೆಚ್ಚ ಮಾಡಿರುವ ಹಣವೆಷ್ಟು; ವಿವರ ನೀಡುವುದು);

ಈ) ಪುನರ್ ವಸತಿಗೊಂಡು 11 ವರ್ಷ ಕಳೆದರು ಗಿರಿಜನರಿಗೆ ಸಿಗಬೇಕಾದ